# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

## ಪುಲಿಕೇಶಿನಗರ ಉಪ ವಿಭಾಗ, ವಾರ್ಡ್ ನಂ.47(ದೇವರ ಜೀವನಹಳ್ಳಿ)

## ವಾರ್ಡ್ ಸಮಿತಿ ಸಭೆ, ದಿನಾಂಕ:07-12-2020 ರ ಸಭಾ ನಡವಳಿ

ಸಂಖ್ಯೆ:ಸ.ಕಂ.ಅ(ಪು.ನ)/ಪಿಆರ್/05/20-21

ದಿನಾಂಕ: 07-12-2020 ರಂದು ಬೆಳ್ಳಗೆ 11.00 ಗಂಟೆಗೆ ವಾರ್ಡ್ ನಂ.47 ಡಿ.ಜೆ.ಹಳ್ಳಿ ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಸಹಾಯಕ ಅಭಿಯಂತರರು ಡಿಜಿ ಹಳ್ಳಿ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು.

| ಕ್ರಮ ಸಂಖ್ಯೆ | ಸಭೆಗೆ ಹಾಜರಾಗಿರುವ ಅಧಿಕಾರಿಗಳು | ಹುದ್ದೆ |
|---|---|---|
| 1 | S. Vishwanatha | Nodal Officer ward No. 47 D.J Halli & Asst. Executive Engineer, Hebbal Sub-division |
| 2 | Ranganath | Asst. Engineer Ward No 47 |
| 3 | Kodhandaramu | JE (Bescom) |
| 4 | Akram Navaz | Work Inspector BWSSB |
| 5 | Nagaraj | Work Inspector Ward No 47 |
| 6 | C. Kumareshan | Horticulture Dept, |
| 7 | A.R Suresh | Welfare Association Modi Garden |
| 8 | Mohammad Zameer | Ward Member (Ward No 47) |
| 9 | Ahmad Ushen | Ward Member (Ward No 47) |
| 10 | Chand Pasha | Ward Member (Ward No 47) |
| 11 | Ilongovan | Ward Member (Ward No 47) |
| 12 | Gopinath | Ward Member (Ward No 47) |
| 13 | Purushotham | Citizen Rights Protection Form |

ಶ್ರೀ ರಂಗನಾಥ್, ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ 47 ರ ಪುಲಿಕೇಶಿನಗರ ಉಪ ವಿಭಾಗ ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಆದೇಶ ಸಂಖ್ಯೆ ಬಿ12(5)/ಪಿಆರ್/35/20-21, ದಿನಾಂಕ: 02.10.2020 ರ ತಿದ್ದುಪಡಿ ಕಛೇರಿ ಆದೇಶದಲ್ಲಿ ಶ್ರೀ ಎಸ್. ವಿಶ್ವನಾಥ್ ಸಹಾಯಕ ಕಾರ್ಯಪಾಲಕ ಅಭಿಯಂತರರು ಹೆಬ್ಬಾಳ ಉಪ ವಿಭಾಗ ರವರನ್ನು ವಾರ್ಡ್ ನಂ.47ರ ನೋಡಲ್ ಅಧಿಕಾರಿಯಾಗಿ ನೇಮಿಸಿರುವುದರಿಂದ ಸದರಿಯವರಿಗೆ ಸಮಿತಿಯ ಪರವಾಗಿ ಸ್ವಾಗತವನ್ನು ಕೋರುತ್ತಾ ಸಭೆಗೆ ಹಾಜರಾಗಿದ್ದ ವಿವಿಧ ಇಲಾಖೆಯ ಅಧಿಕಾರಿ/ನೌಕರರು ಹಾಗೂ ವಿವಿಧ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಸಾರ್ವಜನಿಕರಿಗೆ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸುತ್ತಾ ವಾರ್ಡ್ ಕಮಿಟಿ ಸಭೆಯಲ್ಲಿ ಚರ್ಚಿಸಬೇಕಾದ ಅಜೆಂಡ ವಿಷಯಗಳ ಬಗ್ಗೆ ತಿಳಿಸಿದರು.

- ಡಿ.ಜೆ.ಹಳ್ಳಿ ವ್ಯಾಪ್ತಿಯಲ್ಲಿ ಸ್ವಚ್ಚತೆ ಕಾಪಡಲು ಕೋವಿಡ್-19 ವೈರಸ್‌ನ ಬಗ್ಗೆ ಸರ್ವಾಜನಿಕರಿಗೆ ಕಡ್ಡಯವಾಗಿ ಮಾಸ್ಕ ಧರಿಸುವಂತೆ ಆಟೋಗಳಲ್ಲಿ ಪ್ರಚಾರ ಮಾಡಲು ಸಭೆಯಲ್ಲಿ ತಿಳಿಸಿರುತ್ತಾರೆ.
- ಹಿಂದಿನ ಸಭೇಯಲ್ಲಿ ಸಾರ್ವಜನಿಕರು ಟ್ರಾನ್ಸ್ ಪಾರ್ಮಮರ್ ಅಳವಡಿಸಲು ಪ್ರಸ್ತಾವಣೆಯನ್ನು ಈಗಾಗಲೇ ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ ರವರ ಮೂಲಕ ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ ಹಾಗೂ ಆಯ್ದ ಸ್ಥಳಗಳಲ್ಲಿ ವಿದ್ಯುತ್ ತಂತಿಗಳು ಕುಗ್ಗುವಿಕೆಗೆ (Sagging) ಒಳಗಾಗಿದ್ದು ಇವುಗಳನ್ನು ಸರಿಪಡಿಸಲು ಕೋರಿರುತ್ತಾರೆ ಅದರಂತೆ ಸಭೆಯಲ್ಲಿ ಹಾಜರಿದ್ದ ಶ್ರೀ ಕೋದಂಡ ರಾಮ್, ಜೆ.ಇ ಬೆಸ್ಕಾಂ ರವರಿಗೆ ವಿದ್ಯುತ್ ತಂತಿಗಳು ಕುಗ್ಗುವಿಕೆಗೆ ಒಳಗಾಗಿರುವ ಸ್ಥಳಗಳಲ್ಲಿ ಅವಶ್ಯಕತೆ ಮೆರೆಗೆ ಹೆಚ್ಚುವರಿಯಾಗಿ ವಿದ್ಯುತ್ ಕಂಬಗಳನ್ನು ಅಳವಡಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.
- ಸಭೇಯಲ್ಲಿ ಶ್ರೀ ಸಂದೀಫ್ ಸಹಾಯಕ ಅಭಿಯಂತರರು (ವಿದ್ಯುತ್) ರವರು ಹಾಜರಿಲ್ಲದ ಕಾರಣ ದೂರವಾಣಿ ಮುಖಾಂತರ ಸಂಪರ್ಕಿಸಿ ಬೀದಿ ದೀಪಗಳು ಹಾಗೂ ಎಲ್ಇಡಿ ವ್ಯವಸ್ಥೆಯನ್ನು ಸರಿಪಡಿಸಲು ಈ ಹಿಂದಿನ ಸಭೆಯಲ್ಲಿ ಸೂಚಿಸಲಾಗಿದ್ದರು ಇವರೆವಿಗೂ ಸರಿ ಪಡಿಸದಿರುವುದನ್ನು ಸಾರ್ವಜನಿಕರಿಂದ ಮಾಹಿತಿ ಪಡೆದು

ಮುಂದಿನ ಸಭೆಗೂ ಮುಂಚಿತವಾಗಿ ಶೀರ್ಘ ಅಗತ್ಯ ಕ್ರಮ ಕೈಗೊಂಡು ದುರಸ್ಥಿಪಡಿಸಿ ವರದಿ ನೀಡಲು ಸೂಚಿಸಲಾಗಿರುತ್ತದೆ.

- ಬಿಡಬ್ಲ್ಯೂಎಸ್ಎಸ್‌ಬಿ ರವರು ದೊಡ್ಡಣ್ಣ ನಗರ ಮುಖ್ಯ ರಸ್ತೆಯಲ್ಲಿ ಕಾನೂನು ಬಾಹಿರವಾಗಿ ನೀರಿನ ಸಂಪರ್ಕ ಪಡೆದಿರುವ ಮನೆಗಳನ್ನು ಗುರುತಿಸಿ ಅವುಗಳಿಗೆ ವಾಟರ್ ಮೀಟರ್‌ಗಳನ್ನು ಅಳವಡಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ಹಾಜರಿದ್ದ ಶ್ರೀ ಅಕ್ರಮ್ ನವಾಜ್ ರವರಿಗೆ ಸೂಚಿಸಲಾಯಿತು.
- ಬಿಡಬ್ಲ್ಯೂಎಸ್ಎಸ್‌ಬಿ ರವರು ದೊಡ್ಡಣ್ಣ ನಗರದಲ್ಲಿ ವೇಳಾಪಟ್ಟಿಯಂತೆ ನೀರು ಸರಬರಾಜು ಆಗುತ್ತಿಲ್ಲದಿರುವುದನ್ನು ದೂರವಾಣಿ ಮುಖಾಂತರ ಶ್ರೀ ರಾಹುಲ್ ಸಹಾಯಕ ಅಭಿಯಂತರರು ಬಿಡಬ್ಲ್ಯೂಎಸ್ಎಸ್‌ಬಿ ರವರನ್ನು ಸಂಪರ್ಕಿಸಿ ಸ್ಥಳ ಪರಿಶೀಲಿಸಿ ವೇಳಾ ಪಟ್ಟಿಯಂತೆ ನೀರು ಸರಬರಾಜು ಆಗುವಂತೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.
- ಶ್ರೀ ಚಾಂದ್ ಪಾಶ ರವರು ವಾರ್ಡ್ ಸಂಖ್ಯೆ 47 ರಲ್ಲಿ ಹಲವಾರು ಕಡೆ ರಸ್ತೆ ಕಾಮಗಾರಿಯನ್ನು ಭಾಗಶಃ ನಿರ್ವಹಿಸಿ ಸ್ಥಗಿತಗೊಳಿಸಿರುವುದು ಸಭೆಯ ಗಮನಕ್ಕೆ ತಂದಿದ್ದು ಅದರಂತೆ ಸಭೆಯಲ್ಲಿ ಹಾಜರಿದ್ದ ಶ್ರೀ ರಂಗನಾಥ್ ಸಹಾಯಕ ಅಭಿಯಂತರರು ರವರಿಗೆ ರಸ್ತೆ ಕಾಮಗಾರಿಯನ್ನು ಸ್ಥಗಿತಗೊಳಿಸಿರುವ ಗುತ್ತಿಗೆದಾರರಿಗೆ ಕೂಡಲೇ ಕಾಮಗಾರಿಯನ್ನು ಪ್ರಾರಂಭಿಸಿ ಪೂರ್ಣಗೊಳಿಸಲು ತಿಳಿಸುವಂತೆ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

ಮೇಲ್ಕಂಡ ಸಮಸ್ಯೆಗಳು ಬಗ್ಗೆ ಸುದೀರ್ಘವಾಗಿ ಚರ್ಚಿಸಿ, ನೋಡಲ್ ಅಧಿಕಾರಿ ರವರು ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಎಸ್.ವಿಶ್ವನಾಥ್)
ಅಧ್ಯಕ್ಷರು (ನೋಡಲ್ ಅಧಿಕಾರಿ)
ವಾರ್ಡ್ ಸಮಿತಿ, ವಾರ್ಡ್ ಸಂಖ್ಯೆ: 47

ಪ್ರತಿಯನ್ನು:

01. ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂದ್ರಕಛೇರಿ, ರವರ ಅವಗಾಹನೆಗಾಗಿ ಸಲ್ಲಿಸಿದೆ.
02. ಮಾನ್ಯ ಜಂಟಿ/ಅಪರ ಆಯುಕ್ತರು (ಪೂರ್ವ) ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
03. ಮಾನ್ಯ ಜಂಟಿ ಆಯುಕ್ತರು (ಆರೋಗ್ಯ/ಎಸ್‌ಡಬ್ಲ್ಯೂಎಂ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
04. ಉಪ ಆಯುಕ್ತರು (ಪೂರ್ವ), ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
05. ಕಂದಾಯ ಅಧಿಕಾರಿ (ಪುಲಕೇಶಿನಗರ), ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
06. ಸಹಾಯಕ ಕಾರ್ಯಪಾಲಕ ಅಭಿಯಂತರರು(ಪುಲಿಕೇಶಿನಗರ) ಎಸ್‌ಡಬ್ಲ್ಯೂಎಂ, ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿಡಬ್ಲ್ಯೂಎಸ್ಎಸ್‌ಬಿ, ರವರ ಅವಗಾಹನೆಗಾಗಿ ಕಳುಹಿಸಿದೆ.
08. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪುಲಿಕೇಶಿನಗರ) ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
09. ಸಹಾಯಕ ಅಭಿಯಂತರರು(ವಿದ್ಯುತ್/ಪುಲಕೇಶಿನಗರ) ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
10. ಕಛೇರಿ ಕಡತಕ್ಕೆ.